ESG
Environment Support Group - Trust

**E**nvironmental **S**ocial *Justice* & **G**overnance Initiatives

*Organization in Special Consultative Status with the Economic and Social Council since 2011*

1572, 36th Cross, 100 Feet Ring Road,
Banashankari II Stage,
Bangalore 560070. INDIA
Tel: 91-80-26713559-3561
Voice/Fax: 91-80-26713316
Email: esg@esgindia.org
Web: www.esgindia.org

2 ನೇ ಏಪ್ರಿಲ್ 2015

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣಾ ಮಂತ್ರಾಲಯದ ಮೇಲಿನ ಪರಿಸರ "ಸುಧಾರಣೆ" ಕುರಿತು ಟಿ.ಎಸ್. ಆರ್. ಸುಬ್ರಮಣ್ಯಂ ಸಮಿತಿಯ ನೀಡಿರುವ ವರದಿಯನ್ನು ಬೆಂಬಲಿಸದಿರದಂತೆ ರಾಜ್ಯ ಸರ್ಕಾರಕ್ಕೆ ನೀಡುತ್ತಿರುವ ಮನವಿ ಪತ್ರ.

ಎಲ್ಲಾ ಆತ್ಮೀಯರೇ,

ಭಾರತೀಯ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣಾ ಸಚಿವಾಲಯವು, ಉನ್ನತ ಮಟ್ಟದ ಸಮಿತಿಯ ವರದಿಯನ್ನು (ಇದನ್ನೆ ಟಿ.ಎಸ್. ಆರ್. ಸುಬ್ರಮಣ್ಯಂ ಸಮಿತಿಯ ವರದಿ ಎಂದು ಕರೆಯಲಾಗುತ್ತದೆ) ಬೆಂಬಲಿಸುವಂತೆ, ಅದರಲ್ಲಿಯೂ ಸಹ ಕೇಂದ್ರ ಪರಿಸರ ಸಚಿವಾಲವು ಪ್ರಸ್ತಾಪಿಸಿರುವ "ಸುಧಾರಣೆ" ಅತ್ಯಂತ ವಿವಾದಾತ್ಮಕ ಹೇಳಿಕೆ ಮತ್ತು ಈ ವರದಿಯಲ್ಲಿನ ಕಾಯ್ದೆಗಳನ್ನು ಪರಿಶೀಲಿಸಿ ಕೇಂದ್ರ ಸಚಿವಾಲಯವು ಶಿಫಾರಸ್ಸುಗಳನ್ನು ಕೈಗೊಳ್ಳಲು ದಿನಾಂಕ: 6 ರಿಂದ 8 ಏಪ್ರಿಲ್ 2015 ರಂದು ದೆಹಲಿಯಲ್ಲಿ ಒಂದು ಗುಪ್ತ ಸಭೆಯನ್ನು ಆಯೋಜಿಸಿದ್ದು, ಇದರಲ್ಲಿ ಈ ಸಭೆಯಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಮಾತನಾಡಲಿದ್ದು, ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪದೇಶಗಳ ಪರಿಸರ ಸಚಿವರು, ಪರಿಸರ ಕಾರ್ಯದರ್ಶಿಗಳು, ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಪಾಲ್ಗೊಳ್ಳುತ್ತಿರುತ್ತಾರೆ.

ಈ ವರದಿಯಲ್ಲಿ ಪ್ರಸ್ತಾಪಿಸಿರುವ "ಸುಧಾರಣೆ"ಗಳು ಅತ್ಯಂತ ಪ್ರತಿಗಾಮಿಯಾಗಿದ್ದು, ಪರಿಸರ ಹಾಗೂ ಮಾನವ ಹಕ್ಕುಗಳಿಗೆ ಅಪಾರ ಹಾನಿಯನ್ನು ಉಂಟು ಮಾಡಬಹುದು ಹಾಗೂ ಈಗಿನ ಪರಿಸರವ್ಯವಸ್ಥೆ ಹಾಗೂ ಮುಂದಿನ ತಲೆಮಾರುಗಳ ಭದ್ರತೆಗೆ ಧಕ್ಕೆ ಉಂಟು ಮಾಡಬಹುದೆಂದು ನಾವು ಪರಿಗಣಿಸಿದ್ದೇವೆ. ಈ ಸುಧಾರಣಾ ಪ್ರಸ್ತಾವನೆಗಳನ್ನು ಸರ್ಕಾರ ಏಕೆ ಅನುಷ್ಠಾನಗೊಳಿಸಬಾರದು ಎಂಬುದಕ್ಕೆ ಬಲವಾದ ಕಾರಣಗಳನ್ನು, ಇಎಸ್‌ಜಿ (ಪರಿಸರ ಬೆಂಬಲ ಗುಂಪು) ಸಿದ್ಧಪಡಿಸಿರುವ, ವೆಬ್‌ಸೈಟ್ http://tinyurl.com/pkbfpmw ನಲ್ಲಿ ಲಭ್ಯವಿರುವಂತಹ *"A Non-trivial Threat to India's Ecological and Economic Security"* ಎಂಬ ವರದಿ ಹಾಗೂ ವೆಬ್‌ಸೈಟ್ http://tinyurl.com/mqpx4av ನಲ್ಲಿ ಲಭ್ಯವಿರುವಂತಹ, ಕೇಂದ್ರದ ಜಲಸಂಪನ್ಮೂಲಗಳ ಕಾರ್ಯದರ್ಶಿ ರಾಮಸ್ವಾಮಿ ಐಯ್ಯರ್ ಅವರ *"A hasty, half-baked report on environment"* ಎಂಬ ಶೀರ್ಷಿಕೆಯುಳ್ಳ ಲೇಖನದಲ್ಲಿ, ಸುಬ್ರಹ್ಮಣ್ಯಂ ಸಮಿತಿ ವರದಿಯ ಕುರಿತಂತೆ ಸಮಗ್ರವಾದ ವಿಮರ್ಶೆ ಮಾಡಲಾಗಿದೆ.

ಭಾರತದಲ್ಲಿ ಪರಿಸರಕ್ಕೆ ಸಂಬಂಧಿಸಿದ ಸುಧಾರಣೆಗಳನ್ನು; ಈಗಿರುವ, ಆರ್ಥಿಕ ಪ್ರಗತಿಗಾಗಿ ಪರಿಸರ ಪರಿಗಣನೆಗಳನ್ನು ಮಾಡಿರುವಂತಹ, ಪಾರದರ್ಶಕವಲ್ಲದ ಹಾಗೂ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಸುಬ್ರಹ್ಮಣ್ಯಂ ಸಮಿತಿಯ ಶಿಫಾರಸ್ಸಗಳಂತಲ್ಲದೆ, ಕಾನೂನು ಬದ್ಧವಾಗಿ ಹಾಗೂ ರಾಷ್ಟ್ರವ್ಯಾಪಿ ಸಮಾಲೋಚನೆಗಳನ್ನು ಮಾಡಿದ ನಂತರ ಮಾತ್ರ ಹಾಗೂ ಆಳವಾದ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ಆಧರಿಸಿ ಕೈಗೊಳ್ಳುವಂತೆ, ಪ್ರಧಾನ ಮಂತ್ರಿಗಳನ್ನು ಕೋರುವಂತೆ, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಪರಿಸರ ಮಂತ್ರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರವನ್ನು ಲಗತ್ತಿಸಿದೆ.

<u>ಪರಿಸರಕ್ಕೆ ಹಾನಿಕಾರಕವಾದ, ಈ ಪ್ರಸ್ತಾಪಿತ "ಸುಧಾರಣೆ"ಗಳಿಗೆ ಬೆಂಬಲ ನೀಡದಿರುವಂತೆ ರಾಜ್ಯ ಸರ್ಕಾರಗಳು ಹಾಗೂ ಭಾರತ ಸರ್ಕಾರಗಳ ಮೇಲೆ ಒತ್ತಡ ಹೇರಬೇಕಿದೆ. ಈ ಹಿನ್ನೆಲೆಯಲ್ಲಿ, 2015ರ ಏಪ್ರಿಲ್ 6, ಸೋಮವಾರ, ಬೆಳಗ್ಗೆ 10 ಗಂಟೆಯೊಳಗೆ, ನಿಮ್ಮ ಪೂರ್ಣ ಹೆಸರು, ಒಪ್ಪಿಗೆ, ಅಂಚೆ ಹಾಗೂ ಇ-ಮೇಲ್ ವಿಳಾಸಗಳನ್ನು (ಎಲ್ಲಾ ವಿವರಗಳು ಅಗತ್ಯ) ಒದಗಿಸುವ ಮೂಲಕ, ಲಗತ್ತಿಸಿರುವ ನಮ್ಮ ಮನವಿಗೆ ನಿಮ್ಮ ಬೆಂಬಲವನ್ನು ಸೂಚಿಸುವಂತೆ ಆಹ್ವಾನಿಸಲಾಗಿದೆ.</u>

ನಿಮ್ಮ ಬೆಂಬಲಗಳನ್ನು esg@esgindia.org ಗೆ ಇ-ಮೇಲ್ ಮಾಡಿ
ಅಲ್ಪಾವಧಿ ಸೂಚನೆಯ ಹೊರತಾಗಿಯೂ ನಿಮ್ಮೆಲ್ಲರ ಈ ಸಹಕಾರ ಹಾಗೂ ಬೆಂಬಲಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ನಿಮ್ಮ ಪ್ರಾಮಾಣಿಕ,
ಭಾರ್ಗವಿ ಎಸ್. ರಾವ್ ಹಾಗೂ ಲಿಯೊ ಎಫ್. ಸಲ್ಡಾನಾ,
ಪರಿಸರ ಬೆಂಬಲ ಗುಂಪು – ಬೆಂಗಳೂರು.


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.

**ಬೆಂಬಲ ಪತ್ರ**:
ಭಾರತದ ರಾಜ್ಯಗಳ ಗೌರವಾನ್ವಿತ ಮುಖ್ಯಮಂತ್ರಿಗಳು, ಪರಿಸರ ಮಂತ್ರಿಗಳು ಹಾಗೂ ಎಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿಗಳ ಅಧ್ಯಕ್ಷರು:

ಭಾರತದಲ್ಲಿ ಪರಿಸರಕ್ಕೆ ಸಂಬಂಧಪಟ್ಟಂತೆ ಕೈಗೊಳ್ಳುವ ನಿರ್ಧಾರಗಳಿಗೆ "ಸುಧಾರಣೆ"ಗಳನ್ನು ತರುವ ಸಂಬಂಧ, ಭಾರತ ಸರ್ಕಾರದ ಪರಿಸರ, ಅರಣ್ಯಗಳು & ವಾತಾವರಣ ಬದಲಾವಣೆಯ ಕೆಲವು ಪ್ರಸ್ತಾವನೆಗಳ ಕಡೆ ನಿಮ್ಮೆಲ್ಲರ ಗಮನ ಸೆಳೆಯಲು ಬಯಸುತ್ತೇವೆ. ಈ "ಸುಧಾರಣೆ"ಗಳು ಅತ್ಯಂತ ಪ್ರತಿಗಾಮಿಯಾಗಿದ್ದು, ಪರಿಸರ ಹಾಗೂ ಮಾನವ ಹಕ್ಕುಗಳಿಗೆ ಅಪಾರ, ಬದಲಾಯಿಸಲಾಗದಂತಹ ಹಾನಿಯನ್ನು ಉಂಟು ಮಾಡುತ್ತದೆ ಎಂಬುದು ನಮ್ಮ ಅಭಿಪ್ರಾಯ.

ನಿಮಗೆಲ್ಲ ತಿಳಿದಿರುವಂತೆ ಪರಿಸರ ಮಂತ್ರಾಲಯವು ಅತ್ಯಂತ ವಿವಾದಾತ್ಮಕವಾದ "*Report of High Level Committee to review Acts administered by Ministry of Environment, Forests & Climate Change*" (ಟಿ ಎಸ್ ಆರ್ ಸುಬ್ರಹ್ಮಣ್ಯಂ ವರದಿಯೆಂದು ಕರೆಯಲ್ಪಡುವ)ಯ ಶಿಫಾರಸ್ಸುಗಳಿಗೆ ಮನ್ನಣೆ ನೀಡಿದೆ. ಈ ಸಮಿತಿಯ ಶಿಫಾರಸ್ಸುಗಳು, ದೊಡ್ಡ ಪ್ರಮಾಣದ ಭೂಮಿ, ನೀರು ಹಾಗೂ ಇತರೆ ಸಂಪನ್ಮೂಲಗಳಿಗೆ, ಪೂರ್ವನಿದರ್ಶನಗಳಿಲ್ಲದಿರುವಂತಹ ದೊರೆಯುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಈ ಮೂಲಕ ಬೃಹತ್ ಗಾತ್ರದ, ಮೂಲಭೂತಸೌಕರ್ಯ, ಕೈಗಾರಿಕೆಗಳು ಹಾಗೂ ನಗರ ಯೋಜನೆಗಳಿಗೆ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಾಗುವುದಕ್ಕೆ ದಾರಿಯಾಗುತ್ತದೆ. ಮಂತ್ರಾಲಯದ ಈ "ಸುಧಾರಣೆ"ಗಳ ಕಾರ್ಯಸೂಚಿಗೆ ಎಲ್ಲಾ ರಾಜ್ಯ ಸರ್ಕಾರಗಳ ಬೆಂಬಲ ದೊರಕುವುದನ್ನು ಖಾತ್ರಿಪಡಿಸಲು ಕೇಂದ್ರ ಪರಿಸರ ಮಂತ್ರಿಗಳಾದ ಶ್ರೀ ಪ್ರಕಾಶ್ ಜಾವ್ಡೇಕರ್ ಅವರು 2015ರ ಏಪ್ರಿಲ್ 6-8ರವರೆಗೆ ದೆಹಲಿಯಲ್ಲಿ ಎಲ್ಲಾ ರಾಜ್ಯಗಳ ಪರಿಸರ ಮಂತ್ರಿಗಳು, ಪರಿಸರ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಗಳ ಅಧ್ಯಕ್ಷರ ಸಭೆಯನ್ನು ಏರ್ಪಡಿಸಿದ್ದಾರೆ. ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಈ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಸುಬ್ರಹ್ಮಣ್ಯಂ ಸಮಿತಿ, ಪ್ರಧಾನ ಮಂತ್ರಿ ಮೋದಿಯವರ ಮುಂದಾಳತ್ವದ, ರಾಷ್ಟ್ರೀಯ ಡೆಮೊಕ್ರಾಟಿಕ್ ಅಲೈಯನ್ಸ್‌ನ ಮೊದಲ ಪ್ರಮುಖ ನೀತಿ ಉಪಕ್ರಮಗಳ ಪೈಕಿ ಒಂದಾಗಿದೆ. ಈ ಸಮಿತಿಯ ಉದ್ದೇಶ, "ಈ ಕಾಯ್ದೆಗಳಿಗೆ ಅಗತ್ಯವಿರುವಂತಹ ನಿರ್ದಿಷ್ಟ ತಿದ್ದುಪಡಿಗಳನ್ನು ಮಾಡುವುದು ಹಾಗೂ ಈ ಮೂಲಕ ಉದ್ದೇಶಗಳ ಈಡೇರಿಕೆಗೆ ಪೂರಕವಾಗುವಂತೆ ಅದನ್ನು ರೂಪಿಸುವುದಕ್ಕೆ" ಕರಡನ್ನು ತಯಾರಿಸುವುದಾಗಿದೆ. ಸರ್ಕಾರವಾಗಲೀ ಸಮಿತಿಯಾಗಲೀ, ಈ ಸಾಲಿನ ಅರ್ಥವನ್ನು ಸ್ಪಷ್ಟಪಡಿಸಲು ಅಥವಾ ವಿವರಿಸುವ ಗೋಜಿಗೆ ಹೋಗಲಿಲ್ಲ. ಈ ವರದಿಯನ್ನು ತಯಾರಿಸುವಾಗ ಸಮಿತಿಯು ಕಾರ್ಪೋರೇಟ್ ಅಂಗಗಳೊಂದಿಗೆ, ಲಾಬಿ ಗುಂಪುಗಳೊಂದಿಗೆ, ಕೆಲವು ರಾಜ್ಯ ಸರ್ಕಾರಗಳೊಂದಿಗೆ (ಎಲ್ಲ ರಾಜ್ಯಗಳೂ ಅಲ್ಲ) ಗುಪ್ತ ಸಮಾಲೋಚನೆಗಳನ್ನು ನಡೆಸಿತು ಹಾಗೂ ಕೆಲವೇ ಕೆಲವು ನಗರಗಳಲ್ಲಿ ಕಾಟಾಚಾರಕ್ಕೆ ಎನ್ನಬಹುದಾದಂತಹ ಸಾರ್ವಜನಿಕ ಸಮಾಲೋಚನೆಗಳನ್ನು ಕೈಗೊಂಡಿತು. ಸಮಿತಿಯು 2014ರ ನವೆಂಬರ್ 27ರಂದು, ಅಂದರೆ ಸಮಿತಿ ರಚನೆಯಾದ ಕೇವಲ 3 ತಿಂಗಳುಗಳೊಳಗೆ, ಪ್ರಧಾನ ಮಂತ್ರಿಗಳಿಗೆ ತನ್ನ ವರದಿಯನ್ನು ಸಲ್ಲಿಸಿತು.

ಸಮಿತಿಯು ತನ್ನ ವರದಿಯಲ್ಲಿ, ಭಾರತದ ಪರಿಸರ, ಅರಣ್ಯ ಹಾಗೂ ಜೀವವೈವಿಧ್ಯತೆ ರಕ್ಷಣೆಯ ಕಾನೂನುಗಳಿಗೆ ವ್ಯಾಪಕ ಬದಲಾವಣೆಗಳನ್ನು ಪ್ರಸ್ತಾಪಿಸಿದೆ. ಜೊತೆಗೆ ಹಳೆಯ ಕಾನೂನುಗಳನ್ನು ನಿರ್ವಹಿಸಲು ಹೊಸ ಕಾನೂನುಗಳನ್ನು ಪ್ರಸ್ತಾಪಿಸುತ್ತದೆ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಗಳಂತಹ ದಶಕಗಳ ಹಳೆಯದಾದ ನಿಯಂತ್ರಣ ಸಂಸ್ಥೆಗಳನ್ನು ವಿಸರ್ಜಿಸಿ ಹೊಸ ಪ್ರಾಧಿಕಾರಗಳ ಸ್ಥಾಪನೆಯನ್ನು ಪ್ರೋತ್ಸಹಿಸುತ್ತದೆ. ಭೂಪಾಲ್‌ನಲ್ಲಿ ಜನರು ಅನುಭವಿಸಿದ ನೋವಿನಂತಹ ಭಾರತದಲ್ಲಿನ ಅತ್ಯಂತ ಹಾನಿಕಾರಕ ಅನುಭವವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, "utmost good faith" (ಅತ್ಯಂತ ನಂಬಿಕೆಯ) ಆಧಾರಿತ ಸ್ವಯಂ-ಧೃಡೀಕರಣ ಮಾದರಿಯನ್ನು ಆಧರಿಸಿದ ಸ್ವಯಂ-ನಿಯಂತ್ರಣ ಪಾಲಿಸುವಿಕೆಗೆ ಕೈಗಾರಿಕೆಗಳಿಗೆ ಅನುಮತಿ ನೀಡಬೇಕೆಂದು ಈ ಸಮಿತಿಯು ಪ್ರಸ್ತಾಪಿಸಿರುವುದು ಅತ್ಯಂತ ಆಘಾತಕಾರಿಯಾಗಿದೆ. ಸುಬ್ರಹ್ಮಣ್ಯಂ ಸಮಿತಿಯ ಶಿಫಾರಸ್ಸುಗಳಿಗೆ ಯಾವುದೇ ಪ್ರಾಯೋಗಿಕ ಸಾಕ್ಷಿಗಳಿಲ್ಲ ಹಾಗೂ ಸಮಿತಿಯ ಸದಸ್ಯರ ಅಭಿಪ್ರಾಯಗಳು ಹಾಗೂ ಅವರು ಭೇಟಿ ನೀಡಿದಂತಹ ಜನರ ಅಭಿಪ್ರಾಯಗಳ ಪರಿಣಾಮದಂತೆ ಬಹುಪಾಲು ಗೋಚರಿಸುತ್ತದೆ. ಇಂತಹ ಅತ್ಯುನ್ನತ ಸಮಿತಿಗಳ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಂತಹ ಸ್ಥಾಪಿತ ನಿಯಮಗಳಿಗೆ ವಿರುದ್ಧವಾಗಿ, ಸುಬ್ರಹ್ಮಣ್ಯಂ ಸಮಿತಿಯು, ಭೇಟಿ ಮಾಡಿದವರ ಅಥವಾ ನಡೆಸಿದ ಸಭೆಗಳ ನಡವಳಿಗಳು ಹಾಗೂ ಒಳಗೊಂಡ ವೆಚ್ಚ ವಿವರಗಳು ಒಳಗೊಂಡಂತೆ, ತನ್ನ ಪ್ರಕ್ರಿಯೆಯ ಯಾವುದೇ ದಾಖಲೆಗಳನ್ನು ಸಂಗ್ರಹಿಸಿಲ್ಲ.

**<u>ಸುಬ್ರಹ್ಮಣ್ಯಂ ಸಮಿತಿ ವರದಿಯ ಪರಿಣಾಮಗಳು</u>**
ಒಂದು ವೇಳೆ ಕೇಂದ್ರ ಹಾಗೂ ರಾಜ್ಯಗಳು ಸುಬ್ರಹ್ಮಣ್ಯನ್ ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿಕೊಂಡರೆ, ಈಗಿನ ಪರಿಸರ ನಿರ್ಧಾರಗಳನ್ನು ಮಾಡುವ ನಿಯಮ ಹಾಗೂ ನಿಬಂಧನೆಗಳು ಸಂಪೂರ್ಣವಾಗಿ ದುರ್ಬಲಗವಾಗುತ್ತವೆ ಹಾಗೂ ಸಂಪೂರ್ಣವಾಗಿ ಪ್ರಜಾಪ್ರಭುತ್ವ ವಿರೋಧಿ, ಪಾರದರ್ಶಕತೆಯಿಲ್ಲದ ಹಾಗೂ ಅತ್ಯಂತ ಕೇಂದ್ರೀಕೃತವಾಗುತ್ತವೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗಳ ಪರಿಸರ ಹಾಗೂ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತಹ ಪ್ರಗತಿಪರ ತೀರ್ಪುಗಳನ್ನು ಮೀರುವಂತಹ, ಪ್ರಸ್ತಾಪಿಸಿರುವ ಹೊಸ ಪರಿಸರ ಕಾನೂನುಗಳ ನಿರ್ವಹಣೆ ಕಾಯ್ದೆಯ ಕಲಂ 3ರ ಪ್ರಕಾರ, ಭಾರತದಲ್ಲಿ ಈಗಿರುವ ಪರಿಸರ ನ್ಯಾಯಶಾಸ್ತ್ರದ ಸ್ತಂಬಗಳು ಅಲುಗಾಡುತ್ತವೆ.
ಈಗಿರುವ ನಿಯಮಗಳ ಪ್ರಕಾರ, ಪರಿಸರ ನಿರ್ಧಾರಗಳನ್ನು ಕೈಗೊಳ್ಳುವಾಗ ಹಾಗೂ ಅರಣ್ಯ ಭೂಮಿಯನ್ನು ಪರಿವರ್ತಿಸುವ


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.

ಸಂಬಂಧ ನಿರ್ಧಾರಗಳನ್ನು ಕೈಗೊಳ್ಳುವಾಗ, ನೈಸರ್ಗಿಕ ಸಂಪನ್ಮೂಲ ಅವಲಂಭಿತ ಹಾಗೂ ಅರಣ್ಯ ವಾಸಿ ಸಮುದಾಯಗಳು ಹಾಗೂ ಯೋಜನೆಯ ಪರಿಣಾಮವನ್ನು ಎದುರಿಸುವಂತಹ ಇತರೆ ದುರ್ಬಲ ಸಮುದಾಯಗಳ ಅಭಿಪ್ರಾಯಗಳನ್ನು ಶಾಸನಬದ್ಧವಾಗಿ ಕಡ್ಡಾಯವಾಗಿ ಪಡೆಯಬೇಕು. ಆದರೆ ಸಮಿತಿಯ ಶಿಫಾರಸ್ಸುಗಳು ಇವೆಲ್ಲವನ್ನೂ ಕಡೆಗಣಿಸಿ, ಹೂಡಿಕೆದಾರರಿಗೆ ಪರಿಸರ ಹಾಗೂ ಅರಣ್ಯ ಇಲಾಖೆಗಳಿಂದ ತಮ್ಮ ಯೋಜನೆಗಳಿಗೆ 'ಅತ್ಯಂತ ವೇಗವಾಗಿ' ಅನುಮೋದನೆಯನ್ನು ಪಡೆಯುವ ಅನುಕೂಲವನ್ನು ಒದಗಿಸಿದೆ. ಇದರ ಪರಿಣಾಮವಾಗಿ, ಸಮಿತಿಯ ದೃಷ್ಟಿಯು, ಪರಿಸರ ಹಾಗೂ ಸಾಮಾಜಿಕ ನ್ಯಾಯದ ಪರಿಗಣನೆಗಳನ್ನು, ವ್ಯಾಪಾರ ಹಾಗೂ ಹೂಡಿಕೆಗೆ ಆದ್ಯತೆ ನೀಡುವಂತೆ ಮಾಡಿದೆ.

ಇಂತಹ "ಸುಧಾರಣೆ"ಗಳು ಜೀವವೈವಿಧ್ಯತೆಯ ಮೇಲೆ ಎಂದಿಗೂ ಸರಿಪಡಿಸಲಾಗದಂತಹ ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ. ಜೊತೆಗೆ ಸಂಬಂಧಪಟ್ಟ ಸಾಂಪ್ರದಾಯಿಕ ಜ್ಞಾನ, ಸೂಕ್ಷ್ಮ ಪರಿಸರವ್ಯವಸ್ಥೆಗಳು (ಮೇಲ್ಛಾವಣಿ ಹೊಂದಿರುವಂತಹ 70%ಗಿಂತ ಹೆಚ್ಚಿನ ಪ್ರಮಾಣದ ಅರಣ್ಯಗಳನ್ನು ಮಾತ್ರ ರಕ್ಷಿಸುವುದಕ್ಕೆ ಹೆಚ್ಚು ಒತ್ತು), ಅಳವಿನಂಚಿನಲ್ಲಿರುವಂತಹ ಪ್ರಾಣಿಗಳ ಪ್ರಮಾಣದಲ್ಲಿ ಹೆಚ್ಚಳ ಹಾಗೂ ಹುಲ್ಲುಗಾವಲುಗಳು, ಕೃಷಿ, ಕರಾವಳಿ ಹಾಗೂ ಇತರೆ ನೈಸರ್ಗಿಕ ಸಂಪನ್ಮೂಲ ಅವಲಂಭಿತ ಸಮುದಾಯಗಳ ನಾಶಕ್ಕೆ ಕಾರಣವಾಗುತ್ತದೆ. ಭಂಡವಾಳ ಮಾನದಂಡದ ಆಧಾರಿತ ಬೃಹತ್ ಯೋಜನೆಗಳಿಗೆ ಒಪ್ಪಿಗೆ ನೀಡುವ ಮೂಲಕ ನೈಸರ್ಗಿಕ ಸಂಪನ್ಮೂಗಳ ಶೋಷಣೆಗೆ ಬಾಗಿಲನ್ನು ತೆರೆದಂತಾಗುತ್ತದೆ. ಈ ಪ್ರಕಾರ ವಿಸ್ತಾರವಾದ ಮಾನವ ಹಕ್ಕುಗಳ ಉಲ್ಲಂಘನೆಯೇ ನಿಯಮವಾಗುತ್ತದೆ.

ರಾಷ್ಟ್ರೀಯ ಹಾಗೂ ರಾಜ್ಯ ಪರಿಸರ ನಿರ್ವಹಣಾ ಏಜೆನ್ಸಿಗಳನ್ನು ಸ್ಥಾಪಿಸಲು, ಕೇಂದ್ರದ ಪರಿಸರ ಮಂತ್ರಿಗಳು, ಸುಬ್ರಹ್ಮಣ್ಯನ್ ಸಮಿತಿಯ ಪ್ರಸ್ತಾವನೆಗಳನ್ನು ಒಪ್ಪಿಗೆ ನೀಡಿರುವುದರಿಂದ ಕೇಂದ್ರ-ರಾಜ್ಯಗಳ ನಡುವಿನ ಸಂಬಂಧಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಏಕೆಂದರೆ ಈ ಒಪ್ಪಿಗೆ, ಭವಿಷ್ಯದಲ್ಲಿ ಪರಿಸರ ನಿರ್ವಹಣೆ ಹಾಗೂ ಸಂರಚನೆಗೆ, ಕೇಂದ್ರವೇ ನಿರ್ಧರಿಸುವ ಅಧಿಕಾರವನ್ನು ಒದಗಿಸುತ್ತದೆ. ಪರಿಸರ ನಿರ್ವಹಣೆ ಹಾಗೂ ಸಂರಕ್ಷಣೆಗೆ ಸಂಬಂಧಪಟ್ಟಂತಹ ಸ್ಥಳೀಯ ಸರ್ಕಾರಗಳ ನಿರ್ಣಾಯಕ ಪಾತ್ರವನ್ನು ಸಮಗ್ರವಾಗಿ ಕಡೆಗಣಿಸಲಾಗಿದೆ.

ಭಾರತದಲ್ಲಿ ಪಾರಿಸರಿಕ ನಿರ್ಧಾರಗಳನ್ನು ಕೈಗೊಳ್ಳಲು ಸುಧಾರಣೆಗಳು ಅಗತ್ಯ. ಆದರೆ ಈ ನಿರ್ಧಾರಗಳು ಸಾರ್ವಜನಿಕ ಹಿತಾಸಕ್ತಿಯನ್ನು ಹಾಗೂ ಪರಿಸರದ ಗುಣಮಟ್ಟವನ್ನು ಕಾಪಾಡುವಂತಿರಬೇಕು, ಈಗ ಪ್ರಸ್ತಾಪಿಸಿರುವಂತೆ, ಪರಿಸರ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಿ ಆರ್ಥಿಕ ಪ್ರಗತಿಯನ್ನು ಪ್ರೋತ್ಸಾಹಿಸುವಂತಲ್ಲ. ಪರಿಸರ ಸುಧಾರಣೆಗಳು, ಎಲ್ಲಾ ಸ್ಥಳೀಯ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅರ್ಥಪೂರ್ಣವಾಗಿ ಭಾಗವಹಿಸುವ ಅವಕಾಶವದೊಂದಿಗೆ, ಪ್ರಜಾಸತ್ತಾತ್ಮಕವಾಗಿ ರಾಷ್ಟ್ರವ್ಯಾಪಿ ಚರ್ಚೆಗಳನ್ನು ಏರ್ಪಡಿಸುವ ಮೂಲಕ ಹಾಗೂ ದೇಶದಾದ್ಯಂತ ಎಲ್ಲಾ ಜನರ ಧ್ವನಿಗೆ ಪೂರಕವಾಗಿರುವಂತೆ, ಉಲ್ಲೇಖಿಸಿರುವ ಸಭೆಯಲ್ಲಿ ಭಾರತ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಈ ಮೂಲಕ ತಮ್ಮೆಲ್ಲರನ್ನು ಕಳಕಳಿಯಿಂದ ಕೋರುತ್ತೇವೆ.

ಬುದ್ಧಿಯೊಂತಿಕೆಯೊಂದಿಗೆ ಕೇಳುವುದೇನೆಂದರೆ, ಕೇಂದ್ರ ಸರ್ಕಾರವು ಹೊರತರುತ್ತಿರುವ "ಸುಧಾರಣೆಗಳು" ಎಂಬ ವರದಿಯನ್ನು ಸುಬ್ರಮಣ್ಯಂ ವರದಿಯ ಶಿಪಾರಸ್ಸಿನ ಮೇರೆಗೆ ತಿರಸ್ಕರಿಸುವಂತೆ ಕೇಳಿಕೊಳ್ಳುವುದು.

ಸಹಿ:

ಹೆಸರು ಮಾನ್ಯತೆ ವಿಳಾಸ ಇ-ಮೇಲ್ ಐಡಿ


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.